# ಪ್ರಪಾತದತ್ತ ಪಯಣ

ಪ್ರಪಂಚದ ಇತಿಹಾಸವನ್ನು ಗಮನಿಸಿದಾಗ ಎಲ್ಲ ರಾಷ್ಟ್ರಗಳ ಬದುಕಿನಲ್ಲೂ ಉತ್ಕರ್ಷ ಹಾಗೂ ಅವನತಿಯ ಅವಧಿಗಳು ಕಾಣಸಿಗುತ್ತವೆ. ಯಾವುದೇ ರಾಷ್ಟ್ರದ ಅಭ್ಯುದಯ ಅವನತಿಗಳಿಗೆ ಆ ಕಾಲಘಟ್ಟದ ರಾಜಕೀಯ ಪರಿಸ್ಥಿತಿಯಷ್ಟೇ ಕಾರಣವೆನ್ನಲಾಗದು. ಆ ಕಾಲದಲ್ಲಿ ಬದುಕುತ್ತಿದ್ದ ಜನತೆಯ ಆಲೋಚನೆ, ವರ್ತನೆ ಇತ್ಯಾದಿಗಳೂ ರಾಷ್ಟ್ರದ ಬದುಕಿನ ಏರಿಳಿತಗಳಿಗೆ ಕಾರಣವಾಗುತ್ತವೆ. ಆಧುನಿಕ ಭಾರತದ ಇತಿಹಾಸವನ್ನು ಅವಲೋಕಿಸಿದರೆ, ಹಲವು ದಶಕಗಳ ಕಾಲ ನಡೆದ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟವೆಂಬುದು ನಿಜವಾದ ಅರ್ಥದಲ್ಲಿ ಉತ್ಕರ್ಷದ ಅವಧಿ ಎನ್ನಬಹುದು. ಆಗ ಭಾರತೀಯರ ಜೀವನ ಸುಖಮಯವಾಗಿರಲಿಲ್ಲ, ನಿಜ. ಜನ ದಾರಿದ್ರ್ಯ, ಅಜ್ಞಾನ, ಅನಕ್ಷರತೆ, ರೋಗರುಜಿನ– ಇತ್ಯಾದಿಗಳಿಂದ ನರಳುತ್ತಿದ್ದರು. ಈಗಿನ ಯಾವುದೇ ಜೀವನ ಸೌಕರ್ಯಗಳು ಆಗ ಲಭ್ಯವಿರಲಿಲ್ಲ. ಇಷ್ಟಾದರೂ ಜನ ತಮ್ಮ ಮೌಲ್ಯ ಪ್ರಜ್ಞೆಯನ್ನೂ, ನೈತಿಕತೆಯನ್ನೂ ಪ್ರಖರವಾಗಿ, ಅಕಲಂಕವಾಗಿ ಉಳಿಸಿಕೊಂಡಿದ್ದರು. ತ್ಯಾಗ ಶೀಲತೆ, ಕಷ್ಟ ಸಹಿಷ್ಣುತೆ, ಕರ್ತವ್ಯ ಶ್ರದ್ಧೆ, ಸ್ವಾರ್ಥ ನಿಯಂತ್ರಣ ಮುಂತಾದ ಮಹನೀಯ ಗುಣಗಳೇ ಮೇಲ್ಮೈ ಪಡೆದಿದ್ದ ಆ ಕಾಲದಲ್ಲಿ ಸಣ್ಣತನ, ಸ್ವಾರ್ಥ ದೌಷ್ಟ್ಯ ಇತ್ಯಾದಿಗಳು ಮೇಲೇಳಲು ಅವಕಾಶವಿರಲಿಲ್ಲ. ಹೀಗಾಗಿ ನಮ್ಮ ರಾಷ್ಟ್ರಕ್ಕೆ ಸಾಂಸ್ಕೃತಿಕವಾದ ಘನತೆ ಸಹಜವಾಗಿ ಪ್ರಾಪ್ತವಾಗುವಂತಾಯಿತು.

ಆದರೆ ಸ್ವಾತಂತ್ರ್ಯದ ಜೊತೆ ಜೊತೆಗೇ ರಾಷ್ಟ್ರದ ಇತಿಹಾಸದಲ್ಲಿ ಅವನತಿಯ ಲಕ್ಷಣಗಳು– ನಿಧಾನವಾಗಿ, ಆದರೆ ಸು-ಸ್ಪಷ್ಟವಾಗಿ– ಕಾಣಿಸಿಕೊಳ್ಳಲು ಆರಂಭಿಸಿದವು. ತ್ಯಾಗದ ಸ್ಥಾನವನ್ನು ಸ್ವಾರ್ಥ ಆಕ್ರಮಿಸಿಕೊಂಡಿತು; ನೈತಿಕ ಪ್ರಜ್ಞೆ ಹಿಂದೆ ಸರಿದು, ಉಚ್ಛೃಂಖಲ ಪ್ರವೃತ್ತಿ ವಿಜೃಂಭಿಸತೊಡಗಿತು. ದುಡಿಯುವ ಆಸಕ್ತಿ ಕ್ಷೀಣಿಸಿ, ಸುಖ ಜೀವನದ ಹಂಬಲ ಭುಗಿಲೆದ್ದಿತು. ಶ್ರೇಷ್ಠತೆಗೆ ಮಾದರಿಯಾಗಿ ಬದುಕಿ, ಜನತೆಗೆ ಮಾರ್ಗದರ್ಶಕರಾಗಿದ್ದ ನೇತಾರರು ಮರೆಯಾಗಿ, ಅಧಿಕಾರಕ್ಕಾಗಿ ಹಪಾಹಪಿಸುವ ರಾಜಕಾರಣಿಗಳು ಎಲ್ಲೆಲ್ಲೂ ಹುಟ್ಟಿಕೊಂಡರು. ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಮೊದಲಾದವು ರಾಜಕೀಯ ನಾಯಕರ ಚಹರೆಗಳಾಗಿ, ಸಾಮಾನ್ಯ ಜನರ ಪಾಲಿಗೂ ಅವು ಅನುಕರಣೀಯ ಗುಣಗಳೆನ್ನಿಸ ತೊಡಗಿದವು. ದೇಶದ ಉದ್ದಗಲಕ್ಕೂ ತಾಮಸ ಪ್ರವೃತ್ತಿಗಳು ಮಿಸುಕಾಡಲು ಪ್ರಾರಂಭವಾಗಿ, ಸ್ವಾತಂತ್ರ್ಯಪೂರ್ವ ಭಾರತದ ನೇತಾರರ ಕನಸುಗಳು ಕರಗಿಹೋದವು.

ಪ್ರಸ್ತುತ ಕಾಲಘಟ್ಟದಲ್ಲಿ ನಮ್ಮ ದೇಶ ಆರ್ಥಿಕವಾಗಿ, ಔದ್ಯೋಗಿಕವಾಗಿ, ಶೈಕ್ಷಣಿಕವಾಗಿ ತಕ್ಕಷ್ಟು ಪ್ರಗತಿ ಸಾಧಿಸಿರುವುದೇನೋ ಸರಿ; ಆದರೆ ನೈತಿಕವಾಗಿ ಮಾತ್ರ ಪ್ರಪಾತದತ್ತ ಪಯಣಿಸುತ್ತಿದೆ. ವರ್ತಮಾನ ಪತ್ರಿಕೆಗಳೂ, ವಿದ್ಯುನ್ಮಾನ ಮಾಧ್ಯಮಗಳೂ ನಮ್ಮವರ ವಿಕೃತ ಮನಸ್ಸುಗಳು ನಡೆಸುತ್ತಿರುವ ಪೈಶಾಚಿಕ ಕೃತ್ಯಗಳನ್ನು ಕಣ್ಣೆದುರು ರಾಚುತ್ತಿವೆ. ಒಂದು ಕಾಲದಲ್ಲಿ ಜ್ಞಾನ, ವಿವೇಕ, ನೈತಿಕತೆಗಳನ್ನು ಇಡಿಯ ಜಗತ್ತಿಗೆ ಬೋಧಿಸುತ್ತಿದ್ದ ಭಾರತ ಈಗ ಅವಿವೇಕ ಅನೀತಿಗಳ ಆಡುಂಬೊಲವಾಗಿದೆ. 'ಅಯ್ಯೊ ನನ್ನ ದೇಶವೇ, ಏನಾಗಿದೆ ನಿನಗೆ? ಯಾಕೆ ಹೀಗೆ ಹೊಯ್ದಾಡುವೆ ಅಸ್ವಸ್ಥತೆಯೊಳಗೆ!? ದೀಪದಂಥ ಕಣ್ಣ ತುಂಬ ಬೆಂಕಿಯುರಿವುದೇತಕೆ? ಹಾಲಾಹಲ ತುಂಬಿತೇಕೆ ಹಾಲಿನಂಥ ಹೃದಯಕೆ...?' (ಜಿ.ಎಸ್.ಎಸ್.) ಎಂದು ಅತ್ಯಂತ ಸಂಕಟದಿಂದ ಕೇಳಬೇಕಾಗುವ ಸನ್ನಿವೇಶಗಳು ದಿನ ನಿತ್ಯ ಎದುರಾಗುತ್ತಿವೆ.

ಇಂಥ ನೈತಿಕ ಅಧಃಪತನವನ್ನು ನಿಯಂತ್ರಿಸಲು ಕೇವಲ ಕಾನೂನಷ್ಟೇ ಸಾಲದು. ಮನುಷ್ಯನಲ್ಲಿನ ವಿವೇಕ ಎಚ್ಚರಗೊಳ್ಳಬೇಕು. ಉನ್ನತ ಆಶಯಗಳನ್ನು ಬದುಕಿ ತೋರಿಸುವ ಧೀಮಂತರು ಸಮುದಾಯದ ಸಾಕ್ಷಿಪ್ರಜ್ಞೆಯನ್ನು ಪ್ರಖರಗೊಳಿಸುವಂತಾಗಬೇಕು. ಚಿಂತಕರೂ, ಸಮಾಜ ವಿಜ್ಞಾನಿಗಳೂ, ಮನೋವಿಜ್ಞಾನಿಗಳೂ ಒಟ್ಟಾಗಿ ನಮ್ಮ ದೇಶದ ಪ್ರಸ್ತುತ ಉನ್ಮಾದ ರೋಗಕ್ಕೆ ಪರಿಹಾರವನ್ನು ಕಂಡು ಹಿಡಿಯಬೇಕು. ಆಗ ಮಾತ್ರ ನಮ್ಮ ವಿವೇಕ ದಾರಿದ್ರ್ಯ ತೊಲಗಿ, ಮಾನಸಿಕ ಸ್ವಾಸ್ಥ್ಯ ಮರುಕಳಿಸುವಂತಾದೀತು.

■ **ವೈನತೇಯ**

## ಮಾತೇ ಮುತ್ತು

★ ಒಬ್ಬಾತ ಜೀವನದಲ್ಲಿ ಒಂದೇ ಒಂದು ತಪ್ಪೂ ಮಾಡಿಲ್ಲ ಎಂದಾದರೆ, ಆತ ಯಾವ ಹೊಸ ಕೆಲಸಗಳನ್ನೂ ಮಾಡಲು ಪ್ರಯತ್ನಿಸಿಲ್ಲ ಎಂದರ್ಥ.

-ಆಲ್ಬರ್ಟ್ ಐನ್‌ಸ್ಟೀನ್

★ ಬೆಳಗಿನೊಳಗೊಂದು ಬೆಳಗು
ದೊರಕೊಂಡಡೆ
ಮತ್ತೊಂದು ಬೆಳಗು ಮತ್ತೆಲ್ಲಿಯದೊ..

-ಅಲ್ಲಮಪ್ರಭು

★ ಸೌಂದರ್ಯವನ್ನು ಕಾಣುವ ಸಾಮರ್ಥ್ಯ ಇರುವುದರಿಂದಲೇ ಯೌವನವು ಸಂತೋಷದಾಯಕ. ಸೌಂದರ್ಯವನ್ನು ಕಾಣುವ ಸಾಮರ್ಥ್ಯ ಉಳಿಸಿಕೊಂಡವನು ವೃದ್ಧನಾಗುವುದಿಲ್ಲ.

-ಫ್ರಾಂಝ್ ಕಾಫ್ಕಾ

★ ಮುಗುಳ್ನಗು ನಿಮ್ಮ ಇಡೀ ದೇಹವನ್ನು ಸಮಪ್ರಮಾಣದಲ್ಲಿ ಇಡುತ್ತದೆ. ಮಾಡೆಲ್‌ಗಳು ಆಕರ್ಷಕವಾಗಿರುತ್ತಾರೆ, ಆದರೆ ಅವರಿಗೆ ನಗಲು ಗೊತ್ತಿಲ್ಲ, ಹಾಗಾಗಿಯೇ ಹುಚ್ಚರ ತರಹ ಕಾಣುತ್ತಾರೆ.

-ಸೆರೆನಾ ವಿಲಿಯಮ್ಸ್

★ ತಾಳ್ಮೆಯು ಯಶಸ್ಸಿನ ಬಹುದೊಡ್ಡ ಕೀಲಿಕೈ.

-ಬಿಲ್ ಗೇಟ್ಸ್

★ ಉತ್ಸಾಹವೆಂಬುದು ಕಲ್ಲಿದ್ದಲ ಒಳಗಿನ ಕಾವಾಗಬೇಕೇ ಹೊರತು, ಹುಲ್ಲಿಗೆ ಹತ್ತಿದ ಬೆಂಕಿಯಾಗಬಾರದು.

-ಕುವೆಂಪು

★ ಜೀವನದ ಸೌಂದರ್ಯವನ್ನು ಒಮ್ಮೆ ನೋಡಲು ಶುರು ಮಾಡಿದರೆ ಕುರೂಪ ತನ್ನಿಂದತಾನೇ ದೂರವಾಗುತ್ತದೆ. ನೀವು ಸ್ವರ್ಗ ಮತ್ತು ನರಕಗಳನ್ನು ಒಟ್ಟಿಗೇ ಅನುಭವಿಸಲು ಸಾಧ್ಯವಿಲ್ಲ. ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಿ.

-ಓಶೋ ರಜನೀಶ್

★ ಯಾರು ಅಸಂತುಷ್ಟಿಯಿಂದ ಮುಕ್ತರಾಗುತ್ತಾರೋ, ಅವರಿಗೆ ಜೀವನದಲ್ಲಿ ಶಾಂತಿ, ನೆಮ್ಮದಿ ದೊರೆಯಲಿದೆ.

-ಗೌತಮ ಬುದ್ಧ

★ ಶಿಕ್ಷಣವು ಮನುಷ್ಯನನ್ನು ಶ್ರೇಷ್ಠ ನಾಗರಿಕನನ್ನಾಗಿ ರೂಪಿಸುತ್ತದೆ.

-ಡಾ. ಎಸ್.ರಾಧಾಕೃಷ್ಣನ್

★ ತಿನ್ನುವುದು ಮತ್ತು ಮಲಗುವುದಷ್ಟೆ ಜೀವನ ಅಲ್ಲ; ರಚನಾತ್ಮಕ ಮುನ್ನಡೆಯಲ್ಲಿ ಗಮನ ಹರಿಸುವುದು ಜೀವನ.

-ಪ್ರೇಮ್‌ಚಂದ್

★ ವಿಫಲ ಮದುವೆಗಳಿಗೆ ಪ್ರೇಮದ ಕೊರತೆ ಕಾರಣವಲ್ಲ; ದಂಪತಿಯ ಮಧ್ಯೆ ಗೆಳೆತನದ ಕೊರತೆ ಕಾರಣ.

-ಫ್ರೆಡ್ರಿಕ್ ನೀಟ್ಸೆ

★ ಸಾವಿನ ಬಗ್ಗೆ ನನಗೆ ಹೆದರಿಕೆ ಇಲ್ಲ; ಸಾವು ಸಂಭವಿಸುವಾಗ ನಾನು ಅಲ್ಲಿರಲು ಬಯಸುವುದಿಲ್ಲ.

-ವೂಡೀ ಅಲನ್

★ ಶಿಕ್ಷಣವೆಂದರೆ ಮನಸ್ಸು, ದೇಹ, ಬುದ್ಧಿಗಳೊಂದಿಗೆ ದೊರೆಯುವ ಸಂಸ್ಕಾರ.

-ಹರ್ಡೇಕರ್ ಮಂಜಪ್ಪ

★ ವ್ಯಕ್ತಿಯೊಬ್ಬ ಒಂದು ವಿಷಯಕ್ಕಾಗಿ ಸತ್ತೇ ಹೋದ ಎಂದಾಕ್ಷಣ, ಆ ವಿಷಯ ನಿಜವೇ ಆಗಿರಬೇಕಿಲ್ಲ.

-ಆಸ್ಕರ್ ವೈಲ್ಡ್

★ ಮುದುಕರು ಯುದ್ಧ ಘೋಷಣೆ ಮಾಡುತ್ತಾರೆ. ಆದರೆ ಯುದ್ಧದಲ್ಲಿ ಹೋರಾಡಿ ಸಾಯಲು ಯುವಕರೇ ಬೇಕು.

-ಹರ್ಬರ್ಟ್ ಹೂವರ್

★ ನೀವು ನೋಡಿದ್ದರಲ್ಲಿ ಅರ್ಧದಷ್ಟನ್ನು ಮಾತ್ರ ನಂಬಿ. ಕೇಳಿಸಿಕೊಂಡದ್ದರಲ್ಲಿ ಯಾವುದನ್ನೂ ನಂಬಬೇಡಿ.

-ಎಡ್ಗರ್ ಅಲನ್ ಪೋ